International Journal for Multidisciplinary Research (IJFMR)

E-ISSN: 2582-2160 • Website: www.ijfmr.com • Email: editor@ijfmr.com

# ಕುವೆಂಪು ಅವರ ಶೂದ್ರತಪಸ್ವಿ ಮತ್ತು ಜಲಗಾರ ನಾಟಕಗಳಲ್ಲಿ ವರ್ಣಾಶ್ರಮ ಹಾಗೂ ಪುರೋಹಿತಶಾಹಿ ವಿರೋಧಿ ಚಿಂತನೆ

**ಡಾ. ಕೃಷ್ಣಪ್ಪ ಕೆ.ಎನ್.**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ – ೫೬೨೧೦೧

**ಸಾರಲೇಖ (Abstract):**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರು ಕೇವಲ ಸೃಜನಶೀಲ ಸಾಹಿತಿಯಾಗಿ ಮಾತ್ರವಲ್ಲದೆ, ಸಾಮಾಜಿಕ ಪರಿವರ್ತನೆಯ ಆಶಯವನ್ನು ಹೊಂದಿದ ವೈಚಾರಿಕ ಲೇಖಕರಾಗಿಯೂ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅವರ ಸಾಹಿತ್ಯದಲ್ಲಿ ಜಾತಿ, ವರ್ಣ, ವರ್ಗ, ಧರ್ಮ, ಪುರೋಹಿತಶಾಹಿ, ಕಂದಾಚಾರ, ಮೂಢನಂಬಿಕೆ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧದ ಪ್ರತಿರೋಧ ನಿರಂತರವಾಗಿ ವ್ಯಕ್ತವಾಗುತ್ತದೆ. ಮನುಷ್ಯನ ಘನತೆ, ಸಮಾನತೆ, ವೈಚಾರಿಕತೆ ಮತ್ತು ವಿಶ್ವಮಾನವತೆಯೇ ಅವರ ಚಿಂತನೆಯ ಪ್ರಮುಖ ನೆಲೆಗಳಾಗಿವೆ. ಕುವೆಂಪು ಅವರ ಜಾತಿ ಮತ್ತು ಪುರೋಹಿತಶಾಹಿ ವಿರೋಧಿ ಚಿಂತನೆಯ ಹಿಂದೆ ಅವರ ಬಾಲ್ಯದ ಸಾಮಾಜಿಕ ಅನುಭವಗಳು, ಮಲೆನಾಡಿನ ಪರಿಸರ, ಆಧುನಿಕ ಶಿಕ್ಷಣ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಹಾಗೂ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಚಿಂತನೆಗಳು ಪ್ರಮುಖ ಪಾತ್ರ ವಹಿಸಿವೆ. ಬಾಲ್ಯದಲ್ಲಿಯೇ ಜಾತಿಸೂಚಕ ಲಾಂಛನ ಮತ್ತು ಜಾತಿಭೇದಕ್ಕೆ ಸಂಬಂಧಿಸಿದಂತೆ ಅವರು ಅನುಭವಿಸಿದ ಘಟನೆಗಳು ಮುಂದೆ ಅವರ ಸಾಮಾಜಿಕ ಮತ್ತು ವೈಚಾರಿಕ ದೃಷ್ಟಿಕೋನವನ್ನು ರೂಪಿಸಿದವು.

ಈ ಸಂಶೋಧನಾ ಲೇಖನವು ಮುಖ್ಯವಾಗಿ ಕುವೆಂಪು ಅವರ ‘ಶೂದ್ರತಪಸ್ವಿ’ ಮತ್ತು ‘ಜಲಗಾರ’ ನಾಟಕಗಳನ್ನು ಕೇಂದ್ರವಾಗಿಸಿಕೊಂಡು ಅವರ ಪುರೋಹಿತಶಾಹಿ ಮತ್ತು ಜಾತಿ ವಿರೋಧಿ ಚಿಂತನೆಗಳನ್ನು ವಿಶ್ಲೇಷಿಸುತ್ತದೆ. ಶೂದ್ರತಪಸ್ವಿಯಲ್ಲಿ ಜ್ಞಾನ ಮತ್ತು ತಪಸ್ಸಿನ ಮೇಲೆ ಜಾತಿಯ ಆಧಾರದ ನಿಯಂತ್ರಣವನ್ನು ಪ್ರಶ್ನಿಸುವ ಮೂಲಕ ಸಮಾನತೆಯ ತತ್ತ್ವವನ್ನು ಪ್ರತಿಪಾದಿಸಲಾಗಿದೆ. ಜಲಗಾರದಲ್ಲಿ ಧರ್ಮ, ದೇವರು, ದೇವಾಲಯ ಮತ್ತು ಪುರೋಹಿತಶಾಹಿಯ ನಡುವೆ ನಿರ್ಮಾಣವಾಗಿರುವ ಅಧಿಕಾರ ಸಂಬಂಧಗಳನ್ನು ವಿಡಂಬನಾತ್ಮಕವಾಗಿ ಅನಾವರಣಗೊಳಿಸಲಾಗಿದೆ. ಈ ಎರಡೂ ನಾಟಕಗಳ ಮೂಲಕ ಕುವೆಂಪು ಅವರು ಜ್ಞಾನ, ಧರ್ಮ ಮತ್ತು ದೇವರನ್ನು ಯಾವುದೇ ನಿರ್ದಿಷ್ಟ ಜಾತಿ ಅಥವಾ ವರ್ಗದ ಸ್ವತ್ತಾಗಿಸುವ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ.

ಈ ಅಧ್ಯಯನವು ಕುವೆಂಪು ಅವರ ಸಾಹಿತ್ಯವು ಕೇವಲ ಸಾಹಿತ್ಯಕ ಅಭಿವ್ಯಕ್ತಿಯಲ್ಲದೆ, ಸಾಮಾಜಿಕ ವಿಮರ್ಶೆ ಮತ್ತು ಮಾನವಮುಕ್ತಿಯ ಚಿಂತನೆಯ ಪ್ರಬಲ ಮಾಧ್ಯಮವಾಗಿದೆ ಎಂಬುದನ್ನು ಪ್ರತಿಪಾದಿಸುತ್ತದೆ. ಇಂದಿನ ಸಾಮಾಜಿಕ ಸಂದರ್ಭದಲ್ಲಿ ಜಾತೀಯತೆ, ಕೋಮುವಾದ, ಮೂಲಭೂತವಾದ ಮತ್ತು ಧಾರ್ಮಿಕ ಅಸಹಿಷ್ಣುತೆಗಳು ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಕುವೆಂಪು ಅವರ ವೈಚಾರಿಕ ಚಿಂತನೆಗಳು ಇನ್ನಷ್ಟು ಪ್ರಸ್ತುತವಾಗಿವೆ.

**ಪ್ರಮುಖ ಪದಗಳು (Keywords):** ಕುವೆಂಪು, ಜಾತಿವ್ಯವಸ್ಥೆ, ವರ್ಣವ್ಯವಸ್ಥೆ, ಪುರೋಹಿತಶಾಹಿ, ಶೂದ್ರತಪಸ್ವಿ, ಜಲಗಾರ, ಮಾನವತಾವಾದ, ಸಮಾನತೆ, ಕೋಮುವಾದ, ವೈಚಾರಿಕತೆ.

## ಪ್ರಸ್ತಾವನೆ:

ಇಪ್ಪತ್ತನೇ ಶತಮಾನದಲ್ಲಿ ಆಧುನಿಕ ಕನ್ನಡ ಸಾಹಿತ್ಯಲೋಕ ಕಂಡ ಅದ್ಭುತ ಪ್ರತಿಭೆಗಳಲ್ಲಿ ಕುವೆಂಪು ಅವರು ಪ್ರಮುಖರು. ಶಿಶುಸಾಹಿತ್ಯದಿಂದ ಹಿಡಿದು ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ ಸೇರಿದಂತೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಅವರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಕುವೆಂಪು ಅವರ ಸಮಗ್ರ ಸಾಹಿತ್ಯದ ಕೇಂದ್ರ ಆಶಯಗಳನ್ನು ಗಮನಿಸಿದಾಗ, ಕಂದಾಚಾರ, ಮೂಢನಂಬಿಕೆ, ಗೊಡ್ಡು ಶಾಸ್ತ್ರ-ಸಂಪ್ರದಾಯ, ಜಾತೀಯತೆ, ವರ್ಣಭೇದ ಮತ್ತು ಪುರೋಹಿತಶಾಹಿ ಮುಂತಾದ ಸಾಮಾಜಿಕ ಅನಿಷ್ಟಗಳ

ವಿರುದ್ಧದ ಹೋರಾಟ ಹಾಗೂ ಮಾನವ ಸಮಾನತೆಯ ಪ್ರತಿಪಾದನೆ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಮನುಷ್ಯನನ್ನು ಜಾತಿ, ಮತ, ವರ್ಣ ಮತ್ತು ಧರ್ಮದ ಸಂಕೋಲೆಗಳಿಂದ ಮುಕ್ತಗೊಳಿಸಿ, ಸಮಾನತೆ ಮತ್ತು ಮಾನವೀಯತೆಯ ನೆಲೆಯಲ್ಲಿ ಸಮಾಜವನ್ನು ಕಟ್ಟಬೇಕೆಂಬುದು ಅವರ ಚಿಂತನೆಯ ಮೂಲ ಆಶಯವಾಗಿದೆ.

ಹಿಂದೂ ಧರ್ಮದೊಳಗೆ ಬೇರೂರಿದ್ದ ಕಂದಾಚಾರಗಳು, ಮೂಢನಂಬಿಕೆಗಳು, ವರ್ಣಾಶ್ರಮ ಪದ್ಧತಿ ಮತ್ತು ಮತಮೌಢ್ಯತೆಗಳು ಕುವೆಂಪು ಅವರನ್ನು ಹೊಸ ರೀತಿಯಲ್ಲಿ ಚಿಂತಿಸುವಂತೆ ಮಾಡಿದವು. ವ್ಯಕ್ತಿಯ ವೈಚಾರಿಕ ಬೆಳವಣಿಗೆಯ ಮೇಲೆ ಬಾಲ್ಯದ ಅನುಭವಗಳು ಆಳವಾದ ಪರಿಣಾಮ ಬೀರುತ್ತವೆ. ಕುವೆಂಪು ಅವರಲ್ಲಿಯೂ ಸಾಮಾಜಿಕ ಅಸಮಾನತೆ ಮತ್ತು ಜಾತಿಭೇದದ ವಿರುದ್ಧದ ವೈಚಾರಿಕ ಪ್ರಜ್ಞೆ ರೂಪುಗೊಳ್ಳಲು ಅವರ ಬಾಲ್ಯದ ಅನುಭವಗಳು ಮಹತ್ವದ ಕಾರಣವಾಗಿವೆ. ಬಾಲ್ಯದಲ್ಲಿ ಅವರು ಕಂಡು ಅನುಭವಿಸಿದ ಜಾತೀಯತೆಯ ಸ್ವರೂಪವು ಮುಂದೆ ಅವರ ಸಾಹಿತ್ಯದ ಸಾಮಾಜಿಕ ಮತ್ತು ಮಾನವೀಯ ದೃಷ್ಟಿಕೋನವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಬಾಲ್ಯದ ಒಂದು ಘಟನೆಯನ್ನು ಗಮನಿಸುವುದು ಅಗತ್ಯ. ಕುವೆಂಪು ಅವರು ತೀರ್ಥಹಳ್ಳಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ರಾಮರಾವ್ ಎಂಬ ಇಂಗ್ಲಿಷ್ ಅಧ್ಯಾಪಕರಿದ್ದರು. ಅವರು ವಿದ್ಯಾರ್ಥಿಗಳೆಲ್ಲರಿಗೂ ಅಚ್ಚುಮೆಚ್ಚಿನವರಾಗಿದ್ದರು. ಒಂದು ಸಂದರ್ಭದಲ್ಲಿ ಅವರು ಶಾಲೆಯ ವಿದ್ಯಾರ್ಥಿಗಳು ತಮ್ಮ ತಮ್ಮ ಜಾತಿಯನ್ನು ಸೂಚಿಸುವ ಲಾಂಛನವನ್ನು ಹಣೆಯಲ್ಲಿ ಧರಿಸಿಕೊಂಡು ಬರಬೇಕೆಂದು ಸೂಚಿಸಿದರು. ಬ್ರಾಹ್ಮಣರು ಮತ್ತು ಇತರ ಉನ್ನತ ಜಾತಿಯ ವಿದ್ಯಾರ್ಥಿಗಳು ತಪ್ಪದೇ ನಾಮವನ್ನು ಧರಿಸಿಕೊಂಡು ಬರುತ್ತಿದ್ದರು. ಕುವೆಂಪು ಅವರು ಒಕ್ಕಲಿಗರಾಗಿದ್ದರೂ ನಾಮವನ್ನು ಧರಿಸಬೇಕಾದ ಪರಿಸ್ಥಿತಿ ಎದುರಾಗಿತ್ತು.

ಬಾಲ್ಯದಲ್ಲಿ ನಾಮದಂತಹ ಜಾತಿಸೂಚಕ ಲಾಂಛನಗಳ ಬಗ್ಗೆ ಕುವೆಂಪು ಅವರಿಗೆ ವಿಶೇಷ ಆಸಕ್ತಿ ಇರಲಿಲ್ಲ. ಮನೆಯ ಹಿರಿಯರು ನಾಮ ಧರಿಸಿಕೊಳ್ಳುವ ಸಂದರ್ಭದಲ್ಲಿ ತಾವೂ ಸಹ ಅದನ್ನು ಹಾಕಿಸಿಕೊಳ್ಳುತ್ತಿದ್ದರಷ್ಟೇ ಹೊರತು, ಅದನ್ನು ಅವರು ಯಾವುದೇ ಆಳವಾದ ಧಾರ್ಮಿಕ ಶ್ರದ್ಧೆಯ ಸಂಕೇತವಾಗಿ ಪರಿಗಣಿಸುತ್ತಿರಲಿಲ್ಲ. ಆದರೆ ತೀರ್ಥಹಳ್ಳಿಯ ಶಾಲೆಯಲ್ಲಿ ನಾಮ ಧರಿಸುವುದು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅಗತ್ಯವಾಗಿತ್ತು. ಆದ್ದರಿಂದ ರಾಮರಾವ್ ಅವರ ತರಗತಿಗೆ ಹೋಗುವ ಸಂದರ್ಭದಲ್ಲಿ ನಾಮ ಧರಿಸಿಕೊಂಡು ಬಂದ ಗೆಳೆಯನನ್ನು ಹುಡುಕಿ, ಅವನ ಹಣೆಗೆ ತಮ್ಮ ಹಣೆಯನ್ನು ಒತ್ತಿ ನಾಮದ ಗುರುತನ್ನು ತಮ್ಮ ಹಣೆಯ ಮೇಲೂ ಮೂಡಿಸಿಕೊಂಡು ತರಗತಿಗೆ ಹೋಗುತ್ತಿದ್ದರು. ಈ ಸರಳವಾಗಿ ಕಾಣುವ ಘಟನೆಯ ಹಿಂದೆ ಅಂದಿನ ಜಾತೀಯ ಸಾಮಾಜಿಕ ವ್ಯವಸ್ಥೆಯ ಕ್ರೂರ ಮುಖ ಅಡಗಿತ್ತು. ಈ ಘಟನೆಯೇ ಮುಂದೆ ಜಾತಿಭೇದದ ವಿರುದ್ಧದ ಕುವೆಂಪು ಅವರ ಮನೋಭಾವವನ್ನು ಮತ್ತಷ್ಟು ಗಾಢಗೊಳಿಸಿದ ಅನುಭವಗಳಲ್ಲಿ ಒಂದಾಯಿತು. ಒಂದು ದಿನ ನಾಮ ಧರಿಸುವುದಕ್ಕೆ ಸಂಬಂಧಿಸಿದ ಘಟನೆಯ ಪರಿಣಾಮವಾಗಿ ಅವರ ಹೆಸರು ಶಾಲೆಯ ಕೇಡಿ ರಿಜಿಸ್ಟರ್‌ನಲ್ಲಿ ದಾಖಲಾಗುವ ಪರಿಸ್ಥಿತಿಯೂ ಉಂಟಾಯಿತು. ಕುವೆಂಪು ಅವರು ತಮ್ಮ ಅನುಭವವನ್ನು ಹೀಗೆ ದಾಖಲಿಸಿದ್ದಾರೆ:

> "ಈ ನಾಮದ ದೆಸೆಯಿಂದ ಒಮ್ಮೆ ಕೇಡಿ ರಿಜಿಸ್ಟರಿಗೆ ನನ್ನ ಹೆಸರು ದಾಖಲಾಗಿದ್ದುದೂ ಉಂಟು. ಕೆಲವು ಐಯ್ಯಂಗಾರ ಹುಡುಗರು ಶೂದ್ರನ ಹಣೆಗೆ ಹಣೆಯೊತ್ತಿದರೆ ತಮ್ಮ ಜಾತಿ ಕೆಟ್ಟು ಹೋಗುತ್ತದೆ, ಮಡಿಕೆಟ್ಟು ಮೈಲಿಗೆಯಾಗುತ್ತದೆ ಎಂದು ಹಣೆ ಮುದ್ರಣಕ್ಕೆ ಒಪ್ಪುತ್ತಿರಲಿಲ್ಲ. ಒಮ್ಮೆ ಜಾತಿಭೇದ ಇಲ್ಲದ ಸ್ನೇಹಿತರಾರೂ ಸಿಕ್ಕಲಿಲ್ಲ, ಹಣೆಗೆ ನಾಮ ಒತ್ತಿಕೊಳ್ಳುವುದಕ್ಕೆ. ಆದರೆ ರಾಮರಾಯರ ಕ್ಲಾಸಿಗೆ ಹೋಗಲೇಬೇಕಾಯಿತು. ಯಾರಾದರೇನಂತೆ? ಹಣೆಗೆ ನಾಮದ ಚಿಹ್ನೆ ಬಿದ್ದರಾಯಿತು ಎಂದು, ಹತ್ತಿರದ ಗೆಳೆಯನಲ್ಲದ, ಥಕ್ಕನೆ ಎದುರಾಗಿ ಕಣ್ಣಿಗೆ ಬಿದ್ದ ಹುಡುಗನೊಬ್ಬನನ್ನು ಹಣೆಗೆ ಹಣೆಯೊತ್ತಿ, ನಾನು ಬೆಂಚಿನ ಮೇಲೆ ನಿಲ್ಲಬೇಕಾದ ಶಿಕ್ಷಾ ಪ್ರಸಂಗದಿಂದ ಪಾರುಮಾಡುವಂತೆ ಕೇಳಿಕೊಂಡೆ. ಅವನು ತುಂಬಾ ಮಡಿಹಾರುವ, ನನ್ನ ಬೇಡಿಕೆಯನ್ನು ತಿರಸ್ಕರಿಸಿದ್ದು ಮಾತ್ರವಲ್ಲದೆ...."

ಈ ಘಟನೆಯ ಮುಂದುವರಿದ ಭಾಗದಲ್ಲಿ ಕುವೆಂಪು ಅವರು ಜಾತಿಭೇದದ ಮನೋವೈಜ್ಞಾನಿಕ ಸ್ವರೂಪವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತಾರೆ. ಒಬ್ಬ ಹುಡುಗ ತನ್ನ ಹಣೆಗೆ ಹಣೆಯನ್ನು ಒತ್ತಿಸಿಕೊಳ್ಳಲು ನಿರಾಕರಿಸಿದ್ದಲ್ಲದೆ, ಕುವೆಂಪು ಅವರನ್ನು 'ಶೂದ್ರ' 'ಮುಟ್ಠಾಳ' ಎಂದು ಅವಮಾನಿಸಿದನು. ಇದರಿಂದ ಕೋಪಗೊಂಡ ಕುವೆಂಪು ಅವರು ಆತನ ಜನಿವಾರ ಕಿತ್ತು ಹಾಕಿ ಜಾತಿ ಕೆಡಿಸುವುದಾಗಿ ಬೆದರಿಸಿದರು. ನಂತರ ಆ ಹುಡುಗ ನೀಡಿದ ದೂರಿನ ಆಧಾರದ ಮೇಲೆ ಕುವೆಂಪು ಅವರಿಗೆ ಶಿಕ್ಷೆ ವಿಧಿಸಲಾಯಿತು ಮತ್ತು ಅವರ ಹೆಸರು ಕೇಡಿ ರಿಜಿಸ್ಟರ್‌ನಲ್ಲಿ ದಾಖಲಿಸಲಾಯಿತು. ಕುವೆಂಪು ಅವರ ಮಾತಿನಲ್ಲಿಯೇ ಹೇಳುವುದಾದರೆ, "ನಾನು 'ಉಗುಳಲಿಲ್ಲ, ಉಗುಳುತ್ತೇನೆ ಎಂದು ಹೆದರಿಸಿದೆನಷ್ಟೆ' ಎಂದು ಹೇಳಿದರೂ 'ಉಗುಳುತ್ತೇನೆ ಎಂದದ್ದು ಉಗುಳಿದ್ದಕ್ಕಿಂತಲೂ ಕಡುಪಾಪ!' ಎಂದು ಶಿಕ್ಷೆ ವಿಧಿಸಿಯೇ ಬಿಟ್ಟ."

ಅಂತಿಮವಾಗಿ ಅವರಿಗೆ ಬೆತ್ತದಿಂದ ಅಂಗೈಗಳಿಗೆ ಏಟು ನೀಡಿ ಶಿಕ್ಷಿಸಲಾಯಿತು (ಕುವೆಂಪು ಸಮಗ್ರ ಗದ್ಯ ಸಂಪುಟ–೨, ಪು. ೮೪೮, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪)

ಈ ಬಾಲ್ಯದ ಅನುಭವವನ್ನು ಕೇವಲ ಶಾಲಾ ಜೀವನದ ಒಂದು ಘಟನೆಯೆಂದು ಪರಿಗಣಿಸಲು ಸಾಧ್ಯವಿಲ್ಲ. ಜಾತಿಸೂಚಕ ಲಾಂಛನಗಳು, ಶುದ್ಧ-ಅಶುದ್ಧತೆಯ ಕಲ್ಪನೆ, ಅಸ್ಪೃಶ್ಯತೆಯ ಮನೋಭಾವ ಮತ್ತು ಜಾತಿಯ ಆಧಾರದ ಮೇಲೆ ವ್ಯಕ್ತಿಯೊಬ್ಬನನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆ ಕುವೆಂಪು ಅವರ ಬಾಲಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿದ್ದವು. ಮುಂದೆ ಅವರ ಸಾಹಿತ್ಯದಲ್ಲಿ ಜಾತಿ ಮತ್ತು ವರ್ಣವ್ಯವಸ್ಥೆಯ ವಿರುದ್ಧ ಕಾಣಿಸಿಕೊಳ್ಳುವ ತೀವ್ರವಾದ ಪ್ರತಿರೋಧಕ್ಕೆ ಇಂತಹ ಅನುಭವಗಳು ಒಂದು ಪ್ರಮುಖ ಹಿನ್ನೆಲೆಯಾಗಿ ಕಾರ್ಯನಿರ್ವಹಿಸಿವೆ.

ಮಲೆನಾಡಿನಲ್ಲಿ ಕಳೆದ ಬಾಲ್ಯ, ಇಂಗ್ಲಿಷ್ ಶಿಕ್ಷಣ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಹಾಗೂ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ತತ್ತ್ವಚಿಂತನೆಗಳು ಕುವೆಂಪು ಅವರ ವೈಚಾರಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದವು. ಈ ಎಲ್ಲ ಪ್ರಭಾವಗಳ ಸಂಯೋಜನೆಯಿಂದ ಅವರಲ್ಲಿ ಮಾನವತಾವಾದಿ ಮತ್ತು ವೈಚಾರಿಕ ದೃಷ್ಟಿಕೋನ ಗಟ್ಟಿಯಾಯಿತು. ಪರಿಣಾಮವಾಗಿ ಅವರ ಸಾಹಿತ್ಯದಲ್ಲಿ ಪುರೋಹಿತಶಾಹಿ, ಜಾತಿವ್ಯವಸ್ಥೆ, ವರ್ಣವ್ಯವಸ್ಥೆ, ಕಂದಾಚಾರ ಮತ್ತು ಮತಮೌಢ್ಯಗಳ ವಿರುದ್ಧದ ಪ್ರತಿರೋಧ ನಿರಂತರವಾಗಿ ವ್ಯಕ್ತವಾಗುತ್ತದೆ.

"ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು" ಎಂಬ ಸಮಾನತೆಯ ಆಶಯವನ್ನು ಪ್ರತಿಪಾದಿಸಿದ ಕುವೆಂಪು ಅವರು ಕೋಮುವಾದದ ಕಡು ವಿರೋಧಿಯಾಗಿದ್ದರು. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ಜಾತಿಯ ಹೆಸರಿನಲ್ಲಿ ನಡೆಯುವ ತಾರತಮ್ಯ ಮತ್ತು ಪುರೋಹಿತಶಾಹಿಯ ಮೂಲಕ ಸಮಾಜದ ಮೇಲೆ ಹೇರಲಾಗುವ ಅಧಿಕಾರವನ್ನು ಅವರು ತಮ್ಮ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಶ್ನಿಸಿದ್ದಾರೆ. ಈ ದೃಷ್ಟಿಯಿಂದ ಅವರ 'ಶೂದ್ರತಪಸ್ವಿ' ಮತ್ತು 'ಜಲಗಾರ' ನಾಟಕಗಳು ಅತ್ಯಂತ ಮಹತ್ವದ ಕೃತಿಗಳಾಗಿವೆ.

**'ಶೂದ್ರತಪಸ್ವಿ' ನಾಟಕದಲ್ಲಿ ಜ್ಞಾನ ಮತ್ತು ಸಮಾನತೆಯ ಹಕ್ಕು ಹಾಗೂ ವರ್ಣಾಶ್ರಮ ವ್ಯವಸ್ಥೆಯ ಪ್ರಶ್ನೆ:**

ಪುರೋಹಿತಶಾಹಿಯ ವರ್ಣವ್ಯವಸ್ಥೆಯ ವಿರುದ್ಧ ಕುವೆಂಪು ಅವರು ಮಂಡಿಸಿರುವ ಅತ್ಯಂತ ಪ್ರಬಲ ಸಾಹಿತ್ಯಿಕ ಪ್ರತಿರೋಧಗಳಲ್ಲಿ 'ಶೂದ್ರತಪಸ್ವಿ' ಪ್ರಮುಖವಾದುದು. ಉತ್ತರ ರಾಮಾಯಣದ ಶಂಬೂಕವಧೆಯ ಪ್ರಸಂಗವನ್ನು ಆಧಾರವಾಗಿಸಿಕೊಂಡು ಕುವೆಂಪು ಅವರು ಈ ನಾಟಕವನ್ನು ರಚಿಸಿದ್ದಾರೆ. ಮೂಲ ರಾಮಾಯಣದ ಕಥಾನಕದಲ್ಲಿ ಶಂಬೂಕನು ಶೂದ್ರನಾಗಿದ್ದು ತಪಸ್ಸು ಮಾಡುತ್ತಿದ್ದಾನೆ. ಅವನು ತಪಸ್ಸು ಮಾಡಿದ ಕಾರಣದಿಂದ ತನ್ನ ಮಗನು ಸತ್ತನೆಂದು ಬ್ರಾಹ್ಮಣನೊಬ್ಬ ರಾಮನ ಬಳಿ ದೂರು ನೀಡುತ್ತಾನೆ. ಬ್ರಾಹ್ಮಣನ ಆರೋಪವನ್ನು ಸತ್ಯವೆಂದು ಸ್ವೀಕರಿಸಿದ ರಾಮನು ಶಂಬೂಕನನ್ನು ಸಂಹರಿಸುತ್ತಾನೆ.

ಕುವೆಂಪು ಅವರು ಇದೇ ಕಥೆಯ ಮೂಲ ಎಳೆಯನ್ನು ತೆಗೆದುಕೊಂಡು ಅದಕ್ಕೆ ಹೊಸ ಮಾನವೀಯ ಮತ್ತು ವೈಚಾರಿಕ ಅರ್ಥವನ್ನು ನೀಡಿದ್ದಾರೆ. ಅವರ 'ಶೂದ್ರತಪಸ್ವಿ'ಯಲ್ಲಿ ಜ್ಞಾನವು ಯಾವುದೇ ಒಂದು ಜಾತಿಯ ಸ್ವತ್ತಲ್ಲ ಎಂಬ ಮೂಲಭೂತ ತತ್ತ್ವವನ್ನು ಪ್ರತಿಪಾದಿಸಲಾಗಿದೆ. ವಿದ್ಯೆ, ಜ್ಞಾನ ಮತ್ತು ತಪಸ್ಸಿನ ಹಕ್ಕು ಎಲ್ಲರಿಗೂ ಸಮಾನವಾಗಿದೆ. ತಪಸ್ಸು ಎಂದರೆ ಜ್ಞಾನವನ್ನು ಅರಸುವ ಪ್ರಕ್ರಿಯೆ ಎಂದಾದರೆ, ಜ್ಞಾನವನ್ನು ಸಂಪಾದಿಸಿದ ವ್ಯಕ್ತಿ ಯಾವ ಜಾತಿಗೆ ಸೇರಿದವನಾದರೂ ಗೌರವಕ್ಕೆ ಅರ್ಹನಾಗುತ್ತಾನೆ ಎಂಬ ಮಾನವತಾವಾದಿ ನಿಲುವನ್ನು ಕುವೆಂಪು ಅವರು ನಾಟಕದ ಮೂಲಕ ಮುಂದಿಡುತ್ತಾರೆ.

ಈ ಕಾರಣದಿಂದಲೇ ಕುವೆಂಪು ಅವರ 'ಶೂದ್ರತಪಸ್ವಿ' ಕೇವಲ ರಾಮಾಯಣದ ಒಂದು ಪ್ರಸಂಗದ ಪುನರ್‌ಸೃಷ್ಟಿಯಲ್ಲ. ಅದು ಜ್ಞಾನ ಮತ್ತು ಜಾತಿಯ ನಡುವಿನ ಸಂಬಂಧವನ್ನು ಪ್ರಶ್ನಿಸುವ, ವರ್ಣವ್ಯವಸ್ಥೆಯ ಅಧಿಕಾರವನ್ನು ಸವಾಲು ಮಾಡುವ ಮತ್ತು ಮನುಷ್ಯನ ಘನತೆಯನ್ನು ಪ್ರತಿಪಾದಿಸುವ ಆಧುನಿಕ ವೈಚಾರಿಕ ಕೃತಿ. ಕುವೆಂಪು ಅವರ ನಾಟಕದಲ್ಲಿ ರಾಮನ ಪಾತ್ರವೂ ಹೊಸ ಅರ್ಥವನ್ನು ಪಡೆದುಕೊಳ್ಳುತ್ತದೆ. ಶಂಬೂಕನನ್ನು ಕೇವಲ ಶೂದ್ರನೆಂಬ ಕಾರಣಕ್ಕೆ ತಿರಸ್ಕರಿಸುವ ಬದಲು ಅವನ ಜ್ಞಾನ ಮತ್ತು ತಪಸ್ಸಿನ ಮಹತ್ವವನ್ನು ಗುರುತಿಸುವ ಮಾನವೀಯ ದೃಷ್ಟಿಕೋನ ಇಲ್ಲಿ ಮುಖ್ಯವಾಗುತ್ತದೆ. ಅಂತಿಮವಾಗಿ ಬ್ರಾಹ್ಮಣನ ಮನಃಪರಿವರ್ತನೆಯ ಮೂಲಕ ಶಂಬೂಕನಿಗೆ ಗೌರವ ದೊರೆಯುವಂತೆ ಮಾಡಿರುವುದು ನಾಟಕದ ಸಮಾನತಾವಾದಿ ಆಶಯವನ್ನು ಮತ್ತಷ್ಟು ಬಲಪಡಿಸುತ್ತದೆ.

ಇಲ್ಲಿ ಒಂದು ಮಹತ್ವದ ಪ್ರಶ್ನೆ ಉದ್ಭವಿಸುತ್ತದೆ. ರಾಮಾಯಣದ ಕರ್ತೃ ವಾಲ್ಮೀಕಿ ಶೂದ್ರ ವರ್ಗಕ್ಕೆ ಸೇರಿದವನು ಎಂಬ ನಂಬಿಕೆ ಇದ್ದಾಗ, ಶೂದ್ರನಿಗೆ ತಪಸ್ಸು ಮತ್ತು ಜ್ಞಾನವನ್ನು ನಿರಾಕರಿಸುವಂತಹ ಪ್ರಸಂಗಗಳು ರಾಮಾಯಣದ ಕಥನದಲ್ಲಿ ಹೇಗೆ ಸ್ಥಾನ ಪಡೆದವು? ಕುವೆಂಪು ಅವರು ತಮ್ಮ 'ಶೂದ್ರತಪಸ್ವಿ: ಒಂದು ವಾಗ್ವಾದ' ಎಂಬ ಲೇಖನದಲ್ಲಿ ಈ ಪ್ರಶ್ನೆಯನ್ನು ಚರ್ಚಿಸುತ್ತಾರೆ. ಪುರಾಣ ಮತ್ತು

ಮಹಾಕಾವ್ಯಗಳ ಪಠ್ಯಗಳು ಕಾಲಕ್ರಮೇಣ ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಆಶಯಗಳಿಂದ ಪ್ರಭಾವಿತವಾಗಿರುವ ಸಾಧ್ಯತೆಯನ್ನು ಅವರು ಪ್ರಶ್ನಾರ್ಥಕವಾಗಿ ವಿಶ್ಲೇಷಿಸುತ್ತಾರೆ.

ಈ ಚರ್ಚೆಯ ಪ್ರಸ್ತುತತೆ ಇಂದಿನ ಸಂದರ್ಭದಲ್ಲಿ ಇನ್ನಷ್ಟು ಹೆಚ್ಚಾಗಿದೆ. ಕೋಮುವಾದ, ಮೂಲಭೂತವಾದ, ಧಾರ್ಮಿಕ ಅಸಹಿಷ್ಣುತೆ ಮತ್ತು ಇತಿಹಾಸದ ಏಕಮುಖಿ ವ್ಯಾಖ್ಯಾನಗಳು ಪ್ರಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಕುವೆಂಪು ಅವರ ಮಾನವತಾವಾದಿ ಮತ್ತು ವೈಚಾರಿಕ ಚಿಂತನೆಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಇತಿಹಾಸ ಮತ್ತು ಪಠ್ಯಪುಸ್ತಕಗಳ ವ್ಯಾಖ್ಯಾನಗಳಲ್ಲಿ ಕಾಣಿಸಿಕೊಳ್ಳುವ ಏಕಮುಖಿ ದೃಷ್ಟಿಕೋನಗಳನ್ನು ಪ್ರಶ್ನಿಸುವ ಸಂದರ್ಭದಲ್ಲಿ, ಮಹಾಕಾವ್ಯಗಳು ಮತ್ತು ಪುರಾಣಗಳು ಕೂಡ ಕಾಲಕಾಲಕ್ಕೆ ಸಾಮಾಜಿಕ-ಧಾರ್ಮಿಕ ಉದ್ದೇಶಗಳಿಂದ ಮರುರೂಪಿತವಾಗಿರಬಹುದೆಂಬ ಕುವೆಂಪು ಅವರ ಚಿಂತನೆ ಗಮನಾರ್ಹವಾಗಿದೆ.

**‘ಜಲಗಾರ’ ನಾಟಕದಲ್ಲಿ ಪುರೋಹಿತಶಾಹಿಯ ವಿಡಂಬನೆ:**

ಪುರೋಹಿತಶಾಹಿಯ ಸಾಮಾಜಿಕ ಕಾರ್ಯವಿಧಾನವನ್ನು ಕುವೆಂಪು ಅವರು ಅತ್ಯಂತ ಪರಿಣಾಮಕಾರಿಯಾಗಿ ಅನಾವರಣಗೊಳಿಸಿರುವ ಮತ್ತೊಂದು ಕೃತಿ ‘ಜಲಗಾರ’. ಸಮಾಜದ ಸಾಮಾಜಿಕ ಕಟ್ಟುಪಾಡುಗಳನ್ನು, ದೇವರು ಮತ್ತು ದೇವಾಲಯದ ಕಲ್ಪನೆಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡು ಜನಮಾನಸದಲ್ಲಿ ಬೇರೂರಿಸಿದ ವ್ಯವಸ್ಥೆಯೊಂದರ ಕುರಿತು ಈ ನಾಟಕ ಪ್ರಶ್ನೆಗಳನ್ನು ಎತ್ತುತ್ತದೆ.

ತನ್ನ ಕಾಯಕವನ್ನೇ ಶ್ರೇಷ್ಠವೆಂದು ಭಾವಿಸುವ ಜಲಗಾರನಿಗೆ ಮಾತ್ರ ನಿಜವಾದ ಶಿವನ ದರ್ಶನವಾಗುವುದು ನಾಟಕದ ಕೇಂದ್ರ ಆಶಯಗಳಲ್ಲಿ ಒಂದಾಗಿದೆ. ಸಾಮಾನ್ಯ ಮನುಷ್ಯನಂತೆ ಕಾಣಿಸಿಕೊಳ್ಳುವ ಶಿವನನ್ನು ಆರಂಭದಲ್ಲಿ ಜಲಗಾರನೇ ಶಿವನೆಂದು ಗುರುತಿಸುವುದಿಲ್ಲ. ಇದಕ್ಕೆ ಕಾರಣ ಶಿವನ ಕುರಿತು ಪುರೋಹಿತಶಾಹಿ ಜನಮಾನಸದಲ್ಲಿ ನಿರ್ಮಿಸಿರುವ ಅತಿಮಾನುಷ ಕಲ್ಪನೆಗಳು. ಶಿವನಿಗೆ ಜಟೆ, ಗಂಗೆ, ಹಣೆಗಣ್ಣು, ಹಾವುಗಳು, ವಿಭೂತಿ ಮುಂತಾದ ಬಾಹ್ಯ ಚಿಹ್ನೆಗಳನ್ನು ಜೋಡಿಸುವ ಮೂಲಕ ದೇವರನ್ನು ನಿರ್ದಿಷ್ಟ ರೂಪದಲ್ಲಿ ಮಾತ್ರ ಕಲ್ಪಿಸಿಕೊಳ್ಳುವಂತೆ ಮಾಡಲಾಗಿದೆ. ನಾಟಕದ ಉದ್ದಕ್ಕೂ ಶಿವಾಲಯಕ್ಕೆ ಪೂಜೆಗಾಗಿ ತೆರಳುವ ರೈತರು, ಬ್ರಾಹ್ಮಣರು ಮತ್ತು ದೇವಾಲಯದ ಪುರೋಹಿತರನ್ನು ವಿವಿಧ ಪಾತ್ರಗಳ ಮೂಲಕ ಕುವೆಂಪು ಅವರು ವಿಡಂಬನೆಗೆ ಒಳಪಡಿಸುತ್ತಾರೆ. ಅದಕ್ಕಿಂತಲೂ ಮುಖ್ಯವಾಗಿ, ಶಿವನ ಬಾಯಿಯಲ್ಲಿಯೇ ಪುರೋಹಿತಶಾಹಿಯು ನಿರ್ಮಿಸಿರುವ ದೈವಿಕ ಕಲ್ಪನೆಗಳನ್ನು ಗೇಲಿ ಮಾಡಿಸುತ್ತಾರೆ:

“ಸೋದರನೆ, ಶಾಸ್ತ್ರಿಗಳ ಕಂಗಳಿಗೆ ನಾನು
ನೋಡಲು ಕುರೂಪಿಯಾಗಿದ್ದೆ. ಅದರಿಂದ
ಚೆಲ್ವಂತ ತಣ್ಗದಿರನೊಡವೆ ಮಾಡಿದರೆನಗೆ!
ಅವರ ಭಾಗಕೆ ನಾನು ಪಾಪಿಯಾಗಿದ್ದೆ.
ಅದರಿಂದ ಗಂಗೆಯನು ತೊಡಿಸಿದರು ತಲೆಯಲ್ಲಿ,
ತೊಳೆದೆನ್ನ ಶುದ್ಧಮಾಡಲು ಎಂದು! ಅಸ್ಪೃಶ್ಯನ್
ಆಗಿದ್ದೆ! ಅದರಿಂದ ಹಣೆಗಣ್ಣ ಮುಡಿಸಿದರು
ಸುಟ್ಟೆನ್ನ ಶುಚಿಮಾಡಲೆಂದು! ರೌದ್ರತೆಯನ್
ಈಯಲೆಂದೆನಗೆ ಉರಗಗಳ ಸುತ್ತಿದರು
ಕೊರಳಲ್ಲಿ...”

ಮುಂದುವರಿದು, ಶಿವನು ದೇವಾಲಯದ ಪೀಠದಲ್ಲಿ ಕಾಣಿಸಿಕೊಳ್ಳದಿರುವುದಕ್ಕೆ ಕಾರಣವನ್ನೂ ನಾಟಕವು ವಿಡಂಬನಾತ್ಮಕವಾಗಿ ಸೂಚಿಸುತ್ತದೆ. ಬಾಹ್ಯ ಲಾಂಛನಗಳಿಲ್ಲದ ಶಿವನನ್ನು ಪುರೋಹಿತಶಾಹಿ ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ ನಿಜವಾದ ಶಿವನು ದೇವಾಲಯದ ಪೀಠದಿಂದ ಹೊರಗೇ ಉಳಿಯುತ್ತಾನೆ. ಈ ಆಶಯದ ಮೂಲಕ ಕುವೆಂಪು ಅವರು ದೇವರಿಗಿಂತ ದೇವರ ಸುತ್ತ ನಿರ್ಮಿಸಲಾದ ಸಂಸ್ಥೆ, ಆಚರಣೆ ಮತ್ತು ಅಧಿಕಾರದ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ.

‘ಜಲಗಾರ’ದ ಈ ಭಾಗವು ಪುರೋಹಿತಶಾಹಿಯ ಮೂಲಭೂತ ಸ್ವರೂಪವನ್ನೇ ಪ್ರಶ್ನಿಸುತ್ತದೆ. ದುಡಿಯುವ ಮತ್ತು ಕೆಳವರ್ಗದ ಜನರ ಮುಗ್ಧತೆಯನ್ನು ತಮ್ಮ ಹಿತಾಸಕ್ತಿಗಾಗಿ ಬಳಸಿಕೊಂಡು, ವೈಚಾರಿಕತೆ ಮತ್ತು ಜ್ಞಾನವನ್ನು ಬೆಳೆಸುವ ಬದಲು ಅಜ್ಞಾನ, ಕಂದಾಚಾರ ಮತ್ತು

International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

ಮೂಢನಂಬಿಕೆಗಳನ್ನು ಜನಮಾನಸದಲ್ಲಿ ಬಿತ್ತುವ ವ್ಯವಸ್ಥೆಯನ್ನು ಕುವೆಂಪು ಅವರು ವಿಡಂಬನೆಯ ಮೂಲಕ ಅನಾವರಣಗೊಳಿಸುತ್ತಾರೆ. ಈ ಕಾರಣದಿಂದ 'ಜಲಗಾರ'ವು ಕೇವಲ ಒಂದು ನಾಟಕವಾಗಿರದೆ, ಧರ್ಮದ ಹೆಸರಿನಲ್ಲಿ ನಿರ್ಮಾಣವಾಗುವ ಅಧಿಕಾರ ಸಂಬಂಧಗಳ ವಿರುದ್ಧದ ವೈಚಾರಿಕ ಪ್ರತಿರೋಧದ ಕೃತಿಯಾಗಿ ರೂಪುಗೊಳ್ಳುತ್ತದೆ.

**ಕುವೆಂಪು ಸಾಹಿತ್ಯದ ಸಮಕಾಲೀನ ಪ್ರಸ್ತುತತೆ:**

ಕೆಳವರ್ಗಗಳ ಮತ್ತು ದುಡಿಯುವ ವರ್ಗಗಳ ಮುಗ್ಧತೆಯನ್ನು ತಮ್ಮ ಹಿತಾಸಕ್ತಿಗಾಗಿ ಪುರೋಹಿತಶಾಹಿ ಹೇಗೆ ಬಳಸಿಕೊಂಡಿತು ಎಂಬುದನ್ನು ಕುವೆಂಪು ಅವರು ತಮ್ಮ ಕೃತಿಗಳಲ್ಲಿ ಅನಾವರಣಗೊಳಿಸಿದ್ದಾರೆ. ವೈಜ್ಞಾನಿಕ ಮನೋಭಾವ ಬೆಳೆಸುವ ಬದಲು ಅಜ್ಞಾನ, ಕಂದಾಚಾರ ಮತ್ತು ಮೂಢನಂಬಿಕೆಗಳನ್ನು ಜನಮಾನಸದಲ್ಲಿ ಬೇರೂರಿಸುವ ಸಾಮಾಜಿಕ ವ್ಯವಸ್ಥೆಯನ್ನು ಅವರು ನಿರಂತರವಾಗಿ ಪ್ರಶ್ನಿಸಿದ್ದಾರೆ.

ಕುವೆಂಪು ಅವರ ನಾಟಕಗಳ ಮಹತ್ವ ಇಲ್ಲಿಯೇ ಇದೆ. ಅವು ಕೇವಲ ತಮ್ಮ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಟೀಕಿಸುವ ಕೃತಿಗಳಲ್ಲ; ಇಂದಿನ ಸಮಾಜದಲ್ಲಿಯೂ ಮುಂದುವರಿಯುತ್ತಿರುವ ಜಾತಿ, ಧರ್ಮ, ಅಸಮಾನತೆ ಮತ್ತು ಪುರೋಹಿತಶಾಹಿಯ ವಿವಿಧ ರೂಪಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುವ ವೈಚಾರಿಕ ಕೃತಿಗಳಾಗಿವೆ. ವಿಶೇಷವಾಗಿ 'ಶೂದ್ರತಪಸ್ವಿ' ಮತ್ತು 'ಜಲಗಾರ' ನಾಟಕಗಳು ಜ್ಞಾನ ಮತ್ತು ಧಾರ್ಮಿಕ ಅಧಿಕಾರದ ಮೇಲಿನ ಏಕಸ್ವಾಮ್ಯವನ್ನು ಪ್ರಶ್ನಿಸುತ್ತವೆ. ಜ್ಞಾನಕ್ಕೆ ಜಾತಿಯ ಗಡಿ ಇಲ್ಲ, ಕಾಯಕಕ್ಕೆ ಮೇಲ್ಮೆ-ಕೆಳಮೆಯಿಲ್ಲ ಮತ್ತು ಮನುಷ್ಯನ ಘನತೆಯನ್ನು ಅವನ ಜನ್ಮ ನಿರ್ಧರಿಸುವುದಿಲ್ಲ ಎಂಬ ಮೂಲಭೂತ ಮಾನವತಾವಾದಿ ಸಂದೇಶವನ್ನು ಅವು ಸಾರುತ್ತವೆ. ಈ ಕಾರಣದಿಂದಲೇ ಕುವೆಂಪು ಅವರ ಸಾಹಿತ್ಯವನ್ನು ಕೇವಲ ಆಧುನಿಕ ಕನ್ನಡ ಸಾಹಿತ್ಯದ ಒಂದು ಮಹತ್ವದ ಅಧ್ಯಾಯವಾಗಿ ನೋಡದೆ, ಸಾಮಾಜಿಕ ಪರಿವರ್ತನೆಯ ಸಾಹಿತ್ಯಿಕ ಸಾಧನವಾಗಿಯೂ ಪರಿಗಣಿಸಬೇಕಾಗಿದೆ. ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುವ ಶಕ್ತಿಗಳ ವಿರುದ್ಧ ವೈಚಾರಿಕ ಪ್ರತಿರೋಧವನ್ನು ರೂಪಿಸುವಲ್ಲಿ ಅವರ ಸಾಹಿತ್ಯ ಇಂದಿಗೂ ಮಹತ್ವದ ಪಾತ್ರ ವಹಿಸುತ್ತದೆ.

**ಸಮಾರೋಪ**

ಒಟ್ಟಾರೆಯಾಗಿ ಕುವೆಂಪು ಅವರ ಸಾಹಿತ್ಯವನ್ನು ಗಮನಿಸಿದಾಗ, ಅವರ ಜಾತಿ ವಿರೋಧಿ ಮತ್ತು ಪುರೋಹಿತಶಾಹಿ ವಿರೋಧಿ ಚಿಂತನೆಗಳು ಆಕಸ್ಮಿಕವಾಗಿ ರೂಪುಗೊಂಡವುಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ. ಬಾಲ್ಯದಲ್ಲಿ ಅನುಭವಿಸಿದ ಜಾತಿಭೇದದ ಅನುಭವಗಳು ಮುಂದೆ ಅವರ ಸಾಹಿತ್ಯದಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧದ ಬಲವಾದ ಪ್ರತಿರೋಧವಾಗಿ ವ್ಯಕ್ತವಾದವು. 'ಶೂದ್ರತಪಸ್ವಿ'ಯಲ್ಲಿ ವರ್ಣವ್ಯವಸ್ಥೆ ಮತ್ತು ಜ್ಞಾನಾಧಿಕಾರದ ಪ್ರಶ್ನೆಯನ್ನು ಎತ್ತುವ ಮೂಲಕ ಕುವೆಂಪು ಅವರು ಜ್ಞಾನವು ಎಲ್ಲರ ಹಕ್ಕು ಎಂಬುದನ್ನು ಪ್ರತಿಪಾದಿಸುತ್ತಾರೆ. 'ಜಲಗಾರ'ದಲ್ಲಿ ಧರ್ಮದ ಹೆಸರಿನಲ್ಲಿ ರೂಪುಗೊಂಡ ಪುರೋಹಿತಶಾಹಿ ವ್ಯವಸ್ಥೆಯ ಬಾಹ್ಯ ಆಚರಣೆಗಳು ಮತ್ತು ಅಧಿಕಾರದ ಸ್ವರೂಪವನ್ನು ವಿಡಂಬಿಸುತ್ತಾರೆ

ಆದ್ದರಿಂದ ಕುವೆಂಪು ಅವರ ಸಾಹಿತ್ಯವನ್ನು ಕೇವಲ ಸಾಹಿತ್ಯಕ ಅಭಿವ್ಯಕ್ತಿಯಾಗಿ ನೋಡುವುದಕ್ಕಿಂತಲೂ ಸಾಮಾಜಿಕ ಪರಿವರ್ತನೆಯ ಆಶಯವನ್ನು ಹೊತ್ತ ವೈಚಾರಿಕ ಸಾಹಿತ್ಯವೆಂದು ಗುರುತಿಸುವುದು ಸೂಕ್ತ. "ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು" ಎಂಬ ಅವರ ಆಶಯವು ಜಾತಿ, ವರ್ಣ, ಮತ ಮತ್ತು ಧರ್ಮದ ಎಲ್ಲ ರೀತಿಯ ಅಸಮಾನತೆಗಳನ್ನು ಮೀರಿ ಮಾನವೀಯ ಸಮಾಜವನ್ನು ನಿರ್ಮಿಸುವ ಕನಸನ್ನು ಪ್ರತಿನಿಧಿಸುತ್ತದೆ. ಇಂದಿನ ಸಮಾಜದಲ್ಲಿ ಕೋಮುವಾದ, ಮೂಲಭೂತವಾದ, ಜಾತೀಯತೆ ಮತ್ತು ಧಾರ್ಮಿಕ ಅಸಹಿಷ್ಣುತೆಗಳು ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ, ಕುವೆಂಪು ಅವರ ಮಾನವತಾವಾದಿ ಮತ್ತು ವೈಚಾರಿಕ ಚಿಂತನೆಗಳು ಮತ್ತಷ್ಟು ಪ್ರಸ್ತುತವಾಗುತ್ತವೆ. ಪುರೋಹಿತಶಾಹಿಯ ಆಧುನಿಕ ರೂಪಗಳ ವಿರುದ್ಧ ಹೋರಾಡುವವರಿಗೆ 'ಶೂದ್ರತಪಸ್ವಿ' ಮತ್ತು 'ಜಲಗಾರ' ನಾಟಕಗಳು ವೈಚಾರಿಕ ಆತ್ಮಸ್ಥೈರ್ಯವನ್ನು ನೀಡುವ ಕೃತಿಗಳಾಗಿ ಉಳಿಯುತ್ತವೆ.

**ಪರಾಮರ್ಶನ ಗ್ರಂಥಗಳು**

1. ಕುವೆಂಪು, ಶೂದ್ರತಪಸ್ವಿ, ಉದಯರವಿ ಪ್ರಕಾಶನ, ಮೈಸೂರು, ೨೦೧೫
2. ಕುವೆಂಪು, ಜಲಗಾರ, ಉದಯರವಿ ಪ್ರಕಾಶನ, ಮೈಸೂರು, ೨೦೦೬

3. ತಿಪ್ಪೇರುದ್ರಸ್ವಾಮಿ ಎಚ್., ಕುವೆಂಪು ಅವರ ನಾಟಕಗಳು, ಕಾವ್ಯಶ್ರೀ ಪ್ರಕಾಶನ, ೨೦೧೦
4. ಮರಳುಸಿದ್ದಪ್ಪ ಕೆ., ಆಧುನಿಕ ಕನ್ನಡ ನಾಟಕಗಳು, ಅಂಕಿತ ಪುಸ್ತಕ, ಬೆಂಗಳೂರು, 2017
5. ಶಿವಾರೆಡ್ಡಿ ಕೆ.ಸಿ., (ಸಂ), ಕುವೆಂಪು ಸಮಗ್ರ ಗದ್ಯ ಸಂಪುಟ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪